KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**

**S.C (SESSION CASES)/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

--------------------------------------------------------------------------------
State Complainant}: The Public Prosecutor, Chikkamagaluru.,
Sri.I.S. THEJASVI appearing for Sreeraj @ Annaiah
--------------------------------------------------------------------------------

**Offence punishable under : SEC.314. of INDIAN PENAL CODE,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

**S.C. No: 02/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ.ಬಾಲಕೃಷ್ಣ | ಪ್ರಾ.ಸಾ.- 09 |
| ತಂದೆಯ ಹೆಸರು | : | ಲೇ ಶ್ರೀನಿವಾಸ | ಚಾ.ಸಾ.- 16 |
| ವಯಸ್ಸು | : | 57 ವರ್ಷ | |
| ಉದ್ಯೋಗ | : | ಪ್ರಸೂತಿ ತಜ್ಞರು, ಸಾರ್ವಜನಿಕ ಆಸ್ಪತ್ರೆ ಶೃಂಗೇರಿ | |
| ವಾಸ ಸ್ಥಳ | : | ಶೃಂಗೇರಿ | |

**ದಿನಾಂಕ: 21-02-2023**

**ಪ್ರಮಾಣ ವಚನ ಬೋಧಿಸಲಾಯಿತು.**

**ಃ ಮುಖ್ಯ ವಿಚಾರಣೆಃ ಮಾನ್ಯ ಪಿ.ಪಿ. ಯವರಿಂದಃ**

1. ನಾನು 2015 ನೇ ಇಸವಿ ಫೆಬ್ರುವರಿ ತಿಂಗಳಿನಿಂದ 2020 ರ ನವೆಂಬರ್ ತಿಂಗಳಿನವರೆಗೂ ನಾನು ಕೊಪ್ಪದ ಎಂ.ಎಸ್.ಡಿ.ಎಂ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞರು ಎಂದು ಕೆಲಸ ಮಾಡುತ್ತಿದ್ದೆನು.

2. ದಿಃ 16.02.2019 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ನನ್ನ ಕರ್ತವ್ಯಕ್ಕೆ ಹಾಜರಾದೆನು. ನಾಗರತ್ನ ಎನ್ನುವವರು ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಕಡೆಯವರು ನನ್ನ ಬಳಿಗೆ ಒಂದು ಸ್ಕ್ಯಾನಿಂಗ್ ರಿಪೋರ್ಟನ್ನು ತಂದರು. ಹೊಟ್ಟೆ ನೋವು ಮತ್ತು ರಕ್ತ ಸ್ರಾವವಾಗುತ್ತಿದೆ ಎಂದು ನಾಗರತ್ನ ಇವರನ್ನು ದಾಖಲು ಮಾಡಲಾಗಿದೆ ಎಂದು ಹೇಳಿದರು. ನಾಗರತ್ನ ಅವರ ತಂದೆ ಮತ್ತು ಮತ್ತೊಬ್ಬ ಮಹಿಳೆ ನನ್ನ ಬಳಿ ಬಂದದ್ದು.

3. ಅವರು ತಂದ ಸ್ಕ್ಯಾನಿಂಗ್ ರಿಪೋರ್ಟ ಪ್ರಕಾರ ನಾಗರತ್ನ ಇವರು, ಮೂರು ತಿಂಗಳ ಗರ್ಭಿಣಿ ಎಂದು ಗರ್ಭಪಾತ ಆಗುತ್ತಿದೆ ಎಂದು ಕಂಡುಬಂತು. ನಾನು ಇತಿಹಾಸದ ಬಗ್ಗೆ ನಾಗರತ್ನ ಅವರ ತಂದೆಯನ್ನು ವಿಚಾರಿಸಿದಾಗ ನಾಗರತ್ನ ಇವರು ಪ್ರೀತಿ ಮಾಡುತ್ತಿದ್ದರು, ಹುಡುಗನ ಹೆಸರನ್ನೇನು ಹೇಳಲಿಲ್ಲ, ಆತನೊಂದಿಗೆ ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದಳು ಎಂದು, ಇದರಿಂದ ಗರ್ಭಿಣಿ ಆಗಿದ್ದಳೆಂದು ಹೇಳಿದರು. ಮೂರು ದಿನಗಳ ಹಿಂದೆ ಆ ಹುಡುಗ ಯಾವುದೋ ಮಾತ್ರೆಗಳನ್ನು ನಾಗರತ್ನ ಇವರಿಗೆ ತಂದುಕೊಟ್ಟಿದನು ಎಂದು, ಅದನ್ನು ಆಕೆ ನುಂಗಿದ್ದಳು ಎಂದು, ತದನಂತರ ಹೊಟ್ಟೆನೋವು ಮತ್ತು ರಕ್ತಸ್ರಾವ ಪ್ರಾರಂಭವಾಯಿತು ಎಂದು, ಜಯಪುರದ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದು, ಆ ಆಸ್ಪತ್ರೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲದ್ದರಿಂದ ಕೊಪ್ಪದ ಆಸ್ಪತ್ರೆಗೆ ಹೋಗಿ ಎಂದು ಸೂಚಿಸಿದರು

ಕಾರಣ ಇಲ್ಲಿಗೆ ಬಂದೆವೆಂದು ಹೇಳಿದರು.

4. ನಾಗರತ್ನ ಇವರನ್ನು ಹೆರಿಗೆ ಕೋಣೆಗೆ ನರ್ಸುಗಳ ಸಹಾಯದಿಂದ ಕರೆದೊಯ್ದು, ಪರಿಕ್ಷೀಸಿದಾಗ ಭ್ರೂಣ ಹೊರಗಡೆ ಬರುತ್ತಿತ್ತು, ರಕ್ತಸ್ರಾವವಾಗುತ್ತಿತ್ತು, ಭ್ರೂಣ ಹೊರಗಡೆ ಬಂದಿತು, ನಾನು ಸೂಕ್ತ ಚಿಕಿತ್ಸೆಯನ್ನು ಅಂದರೆ ರಕ್ತಸ್ರಾವ ನಿಲ್ಲಲು ಮತ್ತು ನೋವು ಕಡಿಮೆಯಾಗಲು ಚಿಕಿತ್ಸೆ ಕೊಟ್ಟೆನು. ರಕ್ತ ಪರೀಕ್ಷೆ ಮಾಡಿದಾಗ ನಾಗರತ್ನ ಇವರಿಗೆ ಕಡಿಮೆ ಇತ್ತು. ನಮ್ಮ ಆಸ್ಪತ್ರೆಯಲ್ಲಿ, ಅವರಿಗೆ ಬೇಕಾದ ಒಂದು ಬಾಟಲ್ ರಕ್ತ ಮಾತ್ರ ಇತ್ತು, ಅದನ್ನು ಕೊಡಲಾಯಿತು. ನಾಗರತ್ನ ಇವರು ಚೇತರಿಸಿಕೊಂಡರು. ಬಿಪಿ ಮತ್ತು ನಾಡಿ ಸಹಜವಾಗಿ ಇತ್ತು.

5. ಮಾರನೇ ದಿನದವರೆಗೂ ನಾಗರತ್ನ ಇವರು ಚೆನ್ನಾಗಿಯೇ ಇದ್ದರು. ನಂತರ ರಕ್ತಸ್ರಾವ ಪ್ರಾರಂಭವಾಯಿತು. ಬಿಪಿ ಕಡಿಮೆಯಾಯಿತು, ಈ ಕಾರಣದಿಂದ ನಮ್ಮಲ್ಲಿ ಸರಿಯಾದ ವ್ಯವಸ್ಥೆ ಇಲ್ಲ ಎಂದು ಶಿವಮೊಗ್ಗದ ಆಸ್ಪತ್ರೆಗೆ ರೆಫರ್ ಮಾಡಲಾಯಿತು.

6. ನಾಗರತ್ನ ಇವರು ನಮ್ಮ ಆಸ್ಪತ್ರೆಗೆ ದಾಖಲಾದ ಬಗ್ಗೆ ಕೇಸು ಶೀಟಿನ ಎಕ್ಸ್ಟ್ರಾಕ್ಟ್ ಇರುತ್ತದೆ(ಆ ದಾಖಲೆಯ ಮೇಲೆ case sheet duplicate ಎಂದು ಬರೆದಿದ್ದು, duplicate ಎಂದು ಬರೆದಿರುವುದು extract ಎನ್ನುವ ಬದಲು, ಎಂದು ಸಾಕ್ಷಿದಾರರು ಹೇಳಿರುತ್ತಾರೆ). ದಾಖಲೆಯನ್ನು ನಿಶಾನೆ ಪಿ.18 ಎಂದು ಗುರುತಿಸಲಾಯಿತು.

7. ನಾಗರತ್ನ ಅವರು ನಮ್ಮ ಆಸ್ಪತ್ರೆಯಲ್ಲಿ ದಾಖಲಾದಾಗಿನಿಂದ ಶಿವಮೊಗ್ಗ ಆಸ್ಪತ್ರೆಗೆ ದಾಖಲಾಗುವವರೆಗೂ ಏನೇನಾಯಿತು ಎಂದು ಬರೆದುಕೊಡಿ ಎಂದು ಪೋಲೀಸರು ಕೇಳಿದ್ದರು. ಆ ಬಗ್ಗೆ ಬರೆದುಕೊಟ್ಟ ದಾಖಲೆ ಇದೇ ಇರುತ್ತದೆ. ಅದನ್ನು ನಿಶಾನೆ ಪಿ.19 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು.

8. (ಈ ಸಮಯದಲ್ಲಿ ಮಾನ್ಯ ಪಿ.ಪಿ.ಯವರು ಅಸಲು ರಿಜಿಸ್ಟರನ್ನು ತರಿಸಬೇಕಾಗಿರುತ್ತದೆಂದು ಮುಂದಿನ ಮುಖ್ಯ ವಿಚಾರಣೆಗೆ ಸಮಯ ಬೇಕೆಂದು, ಸಮಯ ಕೇಳಿರುತ್ತಾರೆ, ಮುಂದಿನ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-**
**(ಶುಭ ಗೌಡರ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ಸಾಕ್ಷಿ ಸಹಿಃ

ದಿನಾಂಕಃ 15-07-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀಮತಿ ವೀಣಾ- ಪಿ.ಪಿ.ಯವರಿಂದಃ

9. ಮೃತೆಯು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ, ಆಕೆಯು ಹೊರ ರೋಗಿಯಾಗಿ (OPD) ಚಿಕಿತ್ಸೆ ಪಡೆದಿದ್ದರಿಂದ case sheet ಇಟ್ಟಿರುವುದಿಲ್ಲ ಎಂದು ಹೇಳುತ್ತಾರೆ.

10. ನಿ.ಪಿ.18 ರ ದಾಖಲೆಯ ಮೇಲೆ "case sheet duplicate" ಎಂದು ನಮೂದಿಸಿದ್ದಾರೆ ಎಂದರೆ ಸರಿ. case sheet duplicate ಎಂದು ಏಕೆ ನಮೂದಿಸಿದ್ದಾರೆ ಎಂದರೆ ಸಾಕ್ಷಿಯು ಇದು OPD ಗೆ ಸಂಬಂಧಪಟ್ಟ ದಾಖಲೆ ಎಂದು ಹೇಳುತ್ತಾರೆ.

11. ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಕೊಪ್ಪರವರು ನ್ಯಾಯಾಲಯಕ್ಕೆ ಪತ್ರ ಬರೆದು, ಸದರಿ ಪತ್ರದಲ್ಲಿ ಮೃತೆ ನಾಗರತ್ನರವರ ಮೂಲ

ದಾಖಲಾತಿ ಪತ್ರವು ದೊರೆತಿಲ್ಲ ಎಂದು ತಿಳಿಸಿದ್ದು, ಸದರಿ ಪತ್ರದೊಂದಿಗೆ ಸಿಬ್ಬಂದಿ ಹೇಳಿಕೆಗಳು ಹಾಗೂ ಬೇರೆ ಬೇರೆ ಅಧಿಕಾರಿಗಳಿಗೆ ಬರೆದ ಪತ್ರಗಳನ್ನು ಸಹಾ ಲಗತ್ತಿಸಿದ್ದು, ಒಟ್ಟು ಅಡಕ -1 ರಿಂದ 5 ಎಂದು ಲಗತ್ತಿಸಿದ್ದು ( ಒಟ್ಟು 17 ಹಾಳೆಗಳು ಇರುತ್ತವೆ) ಅವೆಲ್ಲವುಗಳನ್ನು ಒಟ್ಟಾಗಿ ನಿ.ಪಿ.20 ಎಂದು ಗುರುತಿಸಲಾಯಿತು .

12. ಈ ದಿನ ಸಾಕ್ಷಿಯು ನ್ಯಾಯಾಲಯಕ್ಕೆ OPD ದಾಖಲೆಗಳ ದೃಢೀಕರೀಸಲ್ಪಟ್ಟ ಪ್ರತಿಗಳನ್ನು (ಒಟ್ಟು 2 ಹಾಳೆಗಳು ಇರುತ್ತವೆ) ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.21 ಎಂದು ಗುರುತಿಸಲಾಯಿತು.

13. ಈ ದಿನ ಸಾಕ್ಷಿಯು ನ್ಯಾಯಾಲಯಕ್ಕೆ ಮೃತೆ ನಾಗರತ್ನರವರಿಗೆ ರಕ್ತ ಕೊಟ್ಟ ಬಗ್ಗೆ ದೃಢೀಕರೀಸಲ್ಪಟ್ಟ ದಾಖಲೆಯ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.22 ಎಂದು ಗುರುತಿಸಲಾಯಿತು.

14. ಈ ದಿನ ಸಾಕ್ಷಿಯು ನ್ಯಾಯಾಲಯಕ್ಕೆ ದಿನಾಂಕಃ 12-02-2019 ರಿಂದ 16-02-2019 ರವರೆಗೆ ದಾಖಲಾದ ಒಳರೋಗಿಗಳ ರಿಜಿಸ್ಟರಿನ ದೃಢೀಕರಣ ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳ ಪ್ರಕಾರ ಮೃತೆ ನಾಗರತ್ನ ದಿನಾಂಕಃ 12-02-2019 ರಿಂದ 16-02-2019 ರವರೆಗೂ ಒಳರೋಗಿಯಾಗಿ ದಾಖಲಾದ ಬಗ್ಗೆ ಉಲ್ಲೇಖವಿಲ್ಲ ಎಂದು ಹೇಳುತ್ತಾರೆ, ಸದರಿ ದೃಢೀಕರಣ ದಾಖಲೆಗಳನ್ನು (ಒಟ್ಟು 8 ಹಾಳೆಗಳು ಇರುತ್ತವೆ) ನಿ.ಪಿ. 23 ಎಂದು ಗುರುತಿಸಲಾಯಿತು.

15. ಮೃತೆ ನಾಗರತ್ನಳಿಗೆ ಗರ್ಭಪಾತ ಆಗಿದೆ ಎಂದು ಹೇಳಿದ್ದು, ಸದರಿ ಗರ್ಭಪಾತ ಆಗಲು ವೈದ್ಯರ ಸಲಹೆ ಅಥವಾ ಮೇಲ್ವಿಚಾರಣೆ ಇಲ್ಲದೆ, ಗರ್ಭಪಾತ ಮಾಡುವ ಉದ್ದೇಶದಿಂದ ಮಾತ್ರೆಗಳನ್ನು ತಿಂದಲ್ಲಿ ಈ ರೀತಿ ಗರ್ಭಪಾತ ಆಗಬಹುದು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಐ.ಎಸ್.ಟಿ. ವಕೀಲರ ಪರವಾಗಿ ಶ್ರೀ.ಎಸ್.ಕೆ.ಎಂ.</u>

<u>ವಕೀಲರು ಮಧ್ಯಾಹ್ನದವರೆಗೆ ಸಮಯ ಕೋರಿದ್ದು, ಮಧ್ಯಾಹ್ನದವರೆಗೆ ಮುಂದೂಡಲಾಯಿತು</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-15-07-2025**
**(ರಾಜೇಶ್ವರಿ ಎನ್ ಹೆಗಡೆ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ಸಾಕ್ಷಿ ಸಹಿಃ-

**<u>ದಿನಾಂಕಃ 15-07-2025 ರಂದು ಮಧ್ಯಾಹ್ನ ಸಾಕ್ಷಿದಾರರನ್ನು ಪುನಃ ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಐ.ಎಸ್.ಟಿ. ವಕೀಲರಿಂದಃ</u>**

16. Septicemia ಎಂದರೆ ರಕ್ತದಲ್ಲಿ ನಂಜು ಉಂಟಾಗುವುದು. ರಕ್ತ ಕಡಿಮೆಯಾದಲ್ಲಿ Septicemia ಆಗುವುದಿಲ್ಲ. ನಿ.ಪಿ.19 ಎಂದು ಗುರುತಿಸಲಾದ ದಾಖಲೆಯನ್ನು ಆಸ್ಪತ್ರೆಯಲ್ಲಿ ಇಟ್ಟಿರುವ ಯಾವ ದಾಖಲೆ ಆಧಾರದ ಮೇಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ರೋಗಿಯ ಬಳಿ ಇದ್ದ ಹೊರ ರೋಗಿ ದಾಖಲೆಗಳ ಆಧಾರದ ಮೇರೆಗೆ ನಿ.ಪಿ.19 ರ ದಾಖಲೆಯನ್ನು ನೀಡಿರುತ್ತೇವೆ ಎಂದು ಹೇಳಿರುತ್ತಾರೆ.

17. ಹೊರ ರೋಗಿಗಳ ಚೀಟಿಯಲ್ಲಿಯೂ ಸಹಾ ರೋಗಿಗೆ ಸಂಬಂಧಿಸಿದಂತೆ ಇತಿಹಾಸ (history) ಬರೆಯುತ್ತೇವೆ.

18. ಹೊರ ರೋಗಿಯಾಗಿ ಚೀಟಿ ಮಾಡಿಸಿ ಬಂದಂತಹ ರೋಗಿಗೆ ರಕ್ತ ಕೊಡುವುದಾಗಲೀ, ಗ್ಲೂಕೋಸ್ ಕೊಡುವುದಾಗಲೀ ಸರ್ಕಾರಿ ಆಸ್ಪತ್ರೆಯಲ್ಲಿ ಅನುಮತಿ ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ತುರ್ತು ಸಂದರ್ಭದಲ್ಲಿ

ರೋಗಿಯ ಜೀವ ಉಳಿಸಲು ಕೊಡುತ್ತೇವೆ ಎಂದು ಹೇಳುತ್ತಾರೆ.

19. ಹೆರಿಗೆ ವಾರ್ಡಿನಲ್ಲಿ ಹೆರಿಗೆ ದಾಖಲಾತಿ ಪುಸ್ತಕ ಇರುತ್ತದೆ. ಗರ್ಭಪಾತವೂ ಸಹಾ ಹೆರಿಗೆ ರೀತಿಯಲ್ಲಿಯೇ ಆಗುತ್ತದೆ ಎಂದರೆ ಸಾಕ್ಷಿಯು ಅದಕ್ಕೆ ಬೇರೆ ದಾಖಲಾತಿ ಪುಸ್ತಕ ಇಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಗರ್ಭಪಾತದ ದಾಖಲಾತಿ ಪುಸ್ತಕ ನಮ್ಮ ಆಸ್ಪತ್ರೆಯಲ್ಲಿ ಇದೆ ಎಂದರೆ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ.

20. ನನ್ನ ವಿರುದ್ಧ ಕೊಪ್ಪದಲ್ಲಿ ಸಾರ್ವಜನಿಕರು ಧರಣಿ ಮಾಡಿದ್ದರು ಎಂದರೆ ಸರಿ. ನನ್ನ ವಿರುದ್ಧ 6 ಜನ ಬಾಣಂತಿಯರು ರಕ್ತ ಸ್ರಾವದಿಂದ ಸಾಯಲು ನಾನು ಕಾರಣನಾಗಿದ್ದೇನೆಂದು ಪತ್ರಿಕೆಯಲ್ಲಿ ಬಂದಿತ್ತು ಎಂದರೆ ಸರಿಯಲ್ಲ.

21. ನಿ.ಪಿ.18 ಎಂದು ಗುರುತಿಸಲಾದ ದಾಖಲೆಯ original case sheet ಎಲ್ಲಿದೆ ಎಂದರೆ ಸಾಕ್ಷಿಯು ಅದು OPD sheet ಆಗಿದ್ದು, ರೋಗಿಯ ಬಳಿಯೇ ಕೊಟ್ಟಿರುತ್ತೇವೆ ಎಂದು ಹೇಳಿರುತ್ತಾರೆ.

22. ರೋಗಿಗೆ case sheet ಕೊಡುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು OPD sheet ಮತ್ತು referral letter ಕೊಡುತ್ತೇವೆ ಎಂದು ಹೇಳುತ್ತಾರೆ. True copy ಮತ್ತು duplicate copy ಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ.

23. ನಿ.ಪಿ. 18 ಮತ್ತು 19 ರ ದಾಖಲಾತಿಗಳನ್ನು ಯಾವ ಆಧಾರದ ಮೇರೆಗೆ ಕೊಟ್ಟಿದ್ದೇವೆ ಎಂದು ನಿ.ಪಿ. 18 ಮತ್ತು 19 ರಲ್ಲಿ ಬರೆದಿಲ್ಲ ಎಂದರೆ ಸರಿ.

24. ಈ ಪ್ರಕರಣದ ಮೃತೆ ನಾಗರತ್ನಗೆ ಗರ್ಭಪಾತದ procedure ನ್ನು ನಾನೇ ಪ್ರಾರಂಭಿಸಿದ್ದು ಎಂದರೆ ಸರಿಯಲ್ಲ. ಮೃತೆಗೆ ನಾನು ಐ ವಿ ಎಫ್ ನಲ್ಲಿ ಗರ್ಭಪಾತದ ಇಂಜೆಕ್ಷನ್ ಕೊಟ್ಟು ನಾನು ಮನೆಗೆ ಹೋದೆ ಎಂದರೆ ಸರಿಯಲ್ಲ. ನರ್ಸ್ ನನಗೆ ಫೋನ್

ಕರೆ ಮಾಡಿ, ಆಸ್ಪತ್ರೆಗೆ ಬರಲು ಕರೆದಾಗ ನಾನು ಮದ್ಯಪಾನದ ಅಮಲಿನಲ್ಲಿ ಇದ್ದು, ಆಸ್ಪತ್ರೆಗೆ ಬರಲಿಲ್ಲ ಎನ್ನುವುದು ಸರಿಯಲ್ಲ.

25. ಸದರಿ ಇಂಜೆಕ್ಷನ್ನಿನ ವ್ಯತಿರಿಕ್ತ ಪರಿಣಾಮದಿಂದಾಗಿಯೇ Septicemia ಶುರುವಾಯಿತು ಎಂದರೆ ಸರಿಯಲ್ಲ. ನನಗೆ ವಿಷಯ ಗೊತ್ತಾಗಿ ತಕ್ಷಣ ಶಿವಮೊಗ್ಗ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎಂದರೆ ಸಾಕ್ಷಿಯು ರಕ್ತ ಕಡಿಮೆಯಾಗಿ, ರಕ್ತವು ನಮ್ಮ ಆಸ್ಪತ್ರೆಯಲ್ಲಿ ಲಭ್ಯವಿಲ್ಲದೇ ಇದ್ದುದರಿಂದ ಹಾಗೂ ರೋಗಿಯ blood pressure ಕಡಿಮೆಯಾಗಿದ್ದರಿಂದ ಕಳುಹಿಸಿಕೊಟ್ಟೆವು ಎಂದು ಹೇಳುತ್ತಾರೆ.

26. ಬಿ.ಪಿ. ಕಡಿಮೆ ಇದ್ದಲ್ಲಿ ಗ್ಲೂಕೋಸ್ ಕೊಡುವುದಿಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ ನಮ್ಮ ಆಸ್ಪತ್ರೆಯಲ್ಲಿ ಇಟ್ಟಿರುವ ಈ ರೋಗಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಹರಿದು ನಾಶಪಡಿಸಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಮ್ಮ ಆಸ್ಪತ್ರೆಯಿಂದ ದಾಖಲಾತಿಗಳು ಇಲ್ಲ ಎಂದು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

27. ಎಲ್ಲಾ ಊರುಗಳಲ್ಲಿಯೂ ರಕ್ತದಾನಿಗಳು ಇದ್ದಾರೆ ಎಂದರೆ ಇರಬಹುದು. ರಕ್ತದಾನಿಗಳ ಪಟ್ಟಿ ಆಸ್ಪತ್ರೆಯಲ್ಲಿ ಇಟ್ಟಿರುತ್ತೇವೆ ಎಂದರೆ ಸರಿಯಲ್ಲ.

28. ಎರಡೂವರೆ ತಿಂಗಳ ಗರ್ಭವತಿಯಾದಲ್ಲಿ ಹೊರಗಿನಿಂದ ಕೊಟ್ಟ ಮಾತ್ರೆ ಎಷ್ಟರಮಟ್ಟಿಗೆ ಗರ್ಭಪಾತ ಆಗುತ್ತದೆ ಎಂದರೆ ಸಾಕ್ಷಿಯು ಎಲ್ಲಾ ಸಮಯದಲ್ಲೂ ಗರ್ಭಪಾತ ಆಗುತ್ತಿದ್ದು, ಕೆಲವು ಸಂದರ್ಭದಲ್ಲಿ ಸಂಪೂರ್ಣವಾಗಿ ಆಗದೇ ಅರ್ಧಂಬರ್ಧ ಆಗುತ್ತದೆ ಎಂದು ಹೇಳುತ್ತಾರೆ. ಅರ್ಧಂಬರ್ಧ ಗರ್ಭಪಾತ ಆದಲ್ಲಿ ಪೂರ್ಣ ಗರ್ಭಪಾತವನ್ನು ಮಾಡಿಸುವ ವಿಧಾನಗಳಿವೆ.

29. ಈ ಪ್ರಕರಣದಲ್ಲಿ ರೋಗಿಯನ್ನು ನಾನು ನೋಡಿದಾಗ ಗರ್ಭಪಾತ ಬಹುತೇಕವಾಗಿ ಆಗಿತ್ತು. ರಕ್ತಸ್ರಾವ ಗರ್ಭಕೋಶದಿಂದ ಆಗಿರುತ್ತದೆ. ಗರ್ಭಕೋಶ contract (ಕುಗ್ಗುವಿಕೆ) ಆಗಿಲ್ಲದೇ ಇದ್ದಲ್ಲಿ ರಕ್ತಸ್ರಾವ ಆಗಿರುತ್ತದೆ.

30. ಗರ್ಭಕೋಶದಲ್ಲಿ ರಕ್ತಸ್ರಾವ ಆಗಲು ಏನಾದರೂ ಮಾತ್ರೆ ಇದೆಯಾ ಎಂದರೆ ಸಾಕ್ಷಿಯು ಮುಟ್ಟು ಆಗಲು ಮಾತ್ರೆ ಇದೆ ಎಂದು ಹೇಳುತ್ತಾರೆ. ಮುಟ್ಟು ಆಗಲು ಕೊಡುವ ಮಾತ್ರೆ ಗರ್ಭಪಾತ ಆಗಲು ಕೊಡುವ ಮಾತ್ರೆ ಆಗಿರುವುದಿಲ್ಲ.

31. 4 ದಿನಗಳ ಕಾಲ ರೋಗಿಯನ್ನು ಹೊರ ರೋಗಿಯಾಗಿ ಇಟ್ಟುಕೊಂಡು ಚಿಕಿತ್ಸೆ ಕೊಡಲು ಸಾಧ್ಯವಿಲ್ಲ.

32. ನಿ.ಪಿ.21 ರ ದಾಖಲೆಯಲ್ಲಿ ನಾಗರತ್ನ ಎನ್ನುವ ರೋಗಿಯು ಯಾವ ಕಾರಣಕ್ಕಾಗಿ ಆಸ್ಪತ್ರೆಗೆ ಬಂದಿದ್ದರು ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ.

33. ಪ್ರಾಸಾ-1 ರವರು ತನ್ನ ಸಾಕ್ಷ್ಯದಲ್ಲಿ ಮೃತೆಯು 3 ತಿಂಗಳ ಗರ್ಭಿಣಿಯಾಗಿದ್ದು, ಗರ್ಭಪಾತ ಆಗಿ ಹೋಗಿದೆ ಎಂದು ನಾನು ಹೇಳಿದ್ದೇನೆಂದು ತನ್ನ ಸಾಕ್ಷ್ಯದಲ್ಲಿ ಹೇಳಿದ್ದಾರೆ ಎಂದರೆ ಸಾಕ್ಷಿಯು ತಾನು ಗರ್ಭಪಾತ ಆಗಿ ಹೋಗಿದೆ ಎಂದು ಹೇಳಿಲ್ಲ ಎಂದು ಹೇಳುತ್ತಾರೆ.

34. ನಿ.ಪಿ.21 ರ ದಾಖಲೆಯಲ್ಲಿ ನಾಗರತ್ನ ಎನ್ನುವ ಹೆಸರಿನ ರೋಗಿ ಬಂದ ದಿನಾಂಕ ನಮೂದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಇದು ಮುಂದುವರಿದ ದಾಖಲೆಯಾಗಿದ್ದು ದಿನಾಂಕ ಇಲ್ಲ ಎಂದು ಹೇಳುತ್ತಾರೆ.

35. ದಿನಾಂಕಃ 14-02-2019 ರಿಂದ 16-02-2019 ರವರೆಗೂ ನಾಗರತ್ನ ರೋಗಿಯನ್ನು ಒಳರೋಗಿಯಾಗಿ ಹೆರಿಗೆ ವಾರ್ಡಿನಲ್ಲಿ ಇಟ್ಟು ಚಿಕಿತ್ಸೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

36. ದಿನಾಂಕಃ 16-02-2019 ರಂದು ಆಕೆಯನ್ನು ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿದ್ದೇವೆ ಎಂದರೆ ಸಾಕ್ಷಿಯು ದಿನಾಂಕಃ 15-02-2019 ರಂದು ಕಳುಹಿಸಿದ್ದೇವೆ ಎಂದು ಹೇಳುತ್ತಾರೆ.

37. ರೋಗಿಯ ಸಾವಿಗೆ ನಾನೂ ಸಹಾ ಕಾರಣಕರ್ತ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಸದರಿ ರೋಗಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾಶಪಡಿಸಿದ್ದೇವೆ ಎಂದರೆ ಸರಿಯಲ್ಲ.

38. ನಂತರದಲ್ಲಿ ನಾನು ರೋಗಿಯ ಸಂಬಂಧಿಕರಿಗೆ ಸದರಿ ರೋಗಿಯು ಯಾರನ್ನೋ ಪ್ರೀತಿಸಿದ್ದು, ಆತನಿಂದ ಆಕೆಯು ಗರ್ಭವತಿಯಾಗಿದ್ದು, ಆತನು ಗರ್ಭಪಾತ ಮಾತ್ರೆಯನ್ನು ತಂದು ಕೊಟ್ಟಿದ್ದಾನೆಂದು ಸುಳ್ಳು ಹೇಳಿ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ.

39. ನಿ.ಪಿ.18 ಮತ್ತು 19 ರ ದಾಖಲೆಗಳನ್ನು ನಮ್ಮ ಕಥೆಗೆ ಅನುಕೂಲವಾಗುವಂತೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ರೋಗಿಯ ಸಂಬಂಧಿಕರು ನನ್ನ ಬಳಿ ರೋಗಿಯ ಪ್ರಿಯಕರ ಜಯಪುರ ಆಸ್ಪತ್ರೆಯಿಂದ ಗರ್ಭಪಾತದ ಮಾತ್ರೆ ತಂದು ಕೊಟ್ಟಿದ್ದು, ಆಕೆಯು ಅದನ್ನು ನುಂಗಿದ್ದರಿಂದ ಗರ್ಭಪಾತವಾಗಿದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

40. ವೈದ್ಯರ ಚೀಟಿ ಇಲ್ಲದೆ ಗರ್ಭಪಾತದ ಮಾತ್ರೆಯನ್ನು ಕೊಡಲು ಅವಕಾಶ ಇಲ್ಲ ಎಂದರೆ ಸರಿ. ಗರ್ಭಪಾತದ ಮಾತ್ರೆಗಳು ಮೆಡಿಕಲ್ ಸ್ಟೋರ್ ಗಳಲ್ಲಿ ಲಭ್ಯವಿರುವುದಿಲ್ಲ ಎಂದರೆ ಸರಿಯಲ್ಲ.

41. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-15-07-2025**
**(ರಾಜೇಶ್ವರಿ ಎನ್ ಹೆಗಡೆ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ಸಾಕ್ಷಿ ಸಹಿಃ-

Visit **ecourts.gov.in** for updates or download mobile app "**eCourts Services**" from Android or iOS